ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
ARNATAKA LEGISLATIVE ASSEMBLY, RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

೩೧

ಾಖೆ / ವಿಷಯ : DEPARTMENT / SUBJECT: ಲೋಕಸಭೆ ಕಲಾಪ

ಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ    ದಿನಾಂಕ : DATE : ೨೬/೯/೨೦

# ಲೋಕಸಭೆ ದಾಖಲೆಯ ಕಲಾಪ




**ಹೊಸದಿಲ್ಲಿ:** ಹತ್ತು ದಿನಗಳ ಕಾಲ ನಡೆದ ಸಂಸತ್‌ನ ಮಳೆಗಾಲದ ಅಧಿವೇಶನದಲ್ಲಿ ಲೋಕಸಭೆ ಕಲಾಪವು ಹಲವು ದಾಖಲೆಗಳನ್ನು ಬರೆದಿದೆ.

ನಿಗದಿತ 37 ಗಂಟೆ ಬದಲಾಗಿ ಕಲಾಪವು 60 ಗಂಟೆ ನಡೆದಿದೆ. ಮಹತ್ವದ ಮೂರು ಕೃಷಿ ವಿಧೇಯಕಗಳೂ ಸೇರಿದಂತೆ ಒಟ್ಟು 25 ವಿಧೇಯಕಗಳನ್ನು ಸದನ ಅಂಗೀಕರಿಸಿದೆ. ಬಹಳಷ್ಟು ಮಹಿಳಾ ಸಂಸದರು ಮಾತನಾಡಿದ್ದಾರೆ. ಶೂನ್ಯವೇಳೆಯಲ್ಲಿ ಮಹತ್ವದ ವಿಷಯಗಳ ಪ್ರಸ್ತಾಪವಾಗಿ ಸುದೀರ್ಘ ಚರ್ಚೆ ನಡೆದಿರುವುದು, ಎರಡು ದಿನ ಸೆ.20 ಹಾಗೂ ಸೆ.21ರಂದು ಮಧ್ಯರಾತ್ರಿವರೆಗೂ ಕಲಾಪ ನಡೆದಿರುವುದು, ಇದೇ ಮೊದಲ ಬಾರಿ ವಾರಾಂತ್ಯದ ಬಿಡುವಿಲ್ಲದೇ ನಿರಂತರವಾಗಿ ಕಲಾಪ ನಡೆದಿರುವುದು ಸಹ ದಾಖಲೆಯಾಗಿದೆ.

ಕೊರೊನಾ ಕಾರಣದಿಂದ ಈ ಬಾರಿಯ ಸಂಸತ್ ಅಧಿವೇಶನದಲ್ಲಿ ಪ್ರಶ್ನೋತ್ತರ ಕಲಾಪ ಹಾಗೂ ಸದಸ್ಯರ ಖಾಸಗಿ ವಿಧೇಯಕ ಮಂಡನೆಗಳನ್ನು ಈ ಸಲ ಕೈಬಿಡಲಾಗಿತ್ತು. ಸೆ.14ರಿಂದ ಅ.1ರವರೆಗೆ ನಿರಂತರ 18 ದಿನ ಕಲಾಪ ನಡೆಯಬೇಕಾಗಿತ್ತಾದರೂ ಸಂಸದರಿಗೆ ಸೋಂಕು ತಗಲಿದ ಪ್ರಕರಣಗಳು ಹೆಚ್ಚಾದ ಕಾರಣ 10 ದಿನಕ್ಕೇ ಮೊಟಕುಗೊಳಿಸಲಾಗಿದೆ.

**167%** ಲೋಕಸಭೆ ಕಲಾಪದ ಉತ್ಪಾದಕತೆ

**2,300** ಪ್ರಶ್ನೆಗಳಿಗೆ [illegible] ಉತ್ತರ



ಶೂನ್ಯವೇಳೆಯಲ್ಲಿ ಚರ್ಚೆಗೆ ಅವಕಾಶ ನೀಡಿದ ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರು ಶೂನ್ಯವೇಳೆ ಕಲಾಪದ ನಿಜವಾದ ಹೀರೊ.



**-ಪ್ರಹ್ಲಾದ್ ಜೋಶಿ** ಸಂಸದೀಯ ವ್ಯವಹಾರಗಳ ಸಚಿವ

ಅಸಾಮಾನ್ಯ ಪರಿಸ್ಥಿತಿಯಲ್ಲಿ ಮುಂಗಾರು ಅಧಿವೇಶನ ನಡೆದಿದೆ. ಸದಸ್ಯರು ಫಲಪ್ರದ ಚರ್ಚೆಗಳಲ್ಲಿ ಭಾಗವಹಿಸಿರುವುದು ಖುಷಿ ತಂದಿದೆ.



**- ಓಂ ಬಿರ್ಲಾ** ಲೋಕಸಭೆ ಸ್ಪೀಕರ್

## ಕಲಾಪದ ವಿಶೇಷಗಳು

- 10 ದಿನದ ಕಲಾಪದಲ್ಲಿ 25 ವಿಧೇಯಕಗಳ ಅಂಗೀಕಾರ. ಇದಲ್ಲದೇ 16 ವಿಧೇಯಕಗಳನ್ನು ಮರುಮಂಡನೆ ಮಾಡಲಾಗಿತ್ತು.
- ಸೆ.20, ಸೆ.21ರಂದು ರಾತ್ರಿ 12.30ರವರೆಗೆ ಕಲಾಪ ನಡೆದಿದೆ. ಸೆ.21ರಂದು ಸದನದ ಉತ್ಪಾದಕತೆ ಶೇ.234ರಷ್ಟು ದಾಖಲಾಗಿರುವುದು ಇದುವರೆಗಿನ ಇತಿಹಾಸದಲ್ಲಿ ಏಕದಿನದ ಗರಿಷ್ಠ ಉತ್ಪಾದಕತೆಯಾಗಿದೆ.
- 10 ದಿನಗಳ ಕಾಲ ನಡೆದ ಅಧಿವೇಶನದಲ್ಲಿ ನಿಗದಿಗಿಂತ ಒಂದೂವರೆ ಪಟ್ಟು ಜಾಸ್ತಿ ಅಂದರೆ 60 ಗಂಟೆ ಕಲಾಪ ನಡೆದಿದೆ. ಆ ಪೈಕಿ ಶೇ.68ರಷ್ಟು ಸಮಯ ವಿಧೇಯಕಗಳನ್ನು ಕುರಿತ ಚರ್ಚೆಗೆ, ಶೇ.32ರಷ್ಟು ಸಮಯ ಶೂನ್ಯವೇಳೆ, ಇತರ ಕಲಾಪಕ್ಕೆ ಬಳಕೆಯಾಗಿದೆ.
- ಒಟ್ಟು 78 ಮಹಿಳಾ ಸಂಸದರ ಪೈಕಿ 60 ಸಂಸದೆಯರು ಈ ಅಧಿವೇಶನದಲ್ಲಿ ಮಾತನಾಡಿದ್ದಾರೆ. ಇಷ್ಟೊಂದು ಸಂಖ್ಯೆಯ ಮಹಿಳಾ ಸಂಸದರು ಒಂದೇ ಅಧಿವೇಶನದಲ್ಲಿ ಮಾತನಾಡಿರುವುದು ಸಹ ದಾಖಲೆಯಾಗಿದೆ.
- ಶೂನ್ಯವೇಳೆಯಲ್ಲಿ 370 ಸಂಸದರು ವಿವಿಧ ವಿಷಯ ಪ್ರಸ್ತಾಪಿಸಿದ್ದು, 88 ಸಂಸದರು ಚರ್ಚೆಯಲ್ಲಿ ಪಾಲ್ಗೊಂಡಿದ್ದಾರೆ. 181 ಮಹತ್ವದ ವಿಷಯಗಳನ್ನು ವಿವಿಧ ನಿಯಮಗಳ ಅಡಿ ಪ್ರಸ್ತಾಪಿಸಲಾಗಿದೆ.